ಅರ್ ಎ ನಂಃ 39/2023
ಪಿ. ಡಬ್ಲ್ಯೂ-1

**(ಇಂದು ದಿನಾಂಕ 16-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲು ಃ ಎದುರುದಾರರ ಪರ ಶ್ರೀ ಎಸ್ ಕೆ ದೇಶಪಾಂಡೆ ವಕೀಲರಿಂದ**

1. ನಾನು ಪಿಯುಸಿ ಅದ ಮೇಲೆ ಎಕ್ಸಟ್ರನಲ್ ಡಿಗ್ರಿ ಮಾಡಿರುತ್ತೇನೆ. ನಾನು ಖಾಸಗಿ ಕೆಲಸ ಮಾಡುತ್ತೇನೆ ಎಂದರೆ ಸರಿ. ನಾನು ವಿದ್ಯಾನಗರದ ದಾನೇಶ್ವರಿ ನಗರದಲ್ಲಿ ವಾಸವಾಗಿದ್ದೆನೆ ಎಂದರೆ ಸರಿ. ಈ ಮೇಲ್ಮನವಿಯನ್ನು ನನ್ನ ತಂದೆ ಒಬ್ಬರೇ ಹಾಕಿರುತ್ತಾರೆ. ಸಾಕ್ಷಿ ಮುಂದುವರೆದು ರಾಮಪ್ಪ ಹುಲಮನಿ ರವರು ಸಹ ಹಾಕಿರುತ್ತಾರೆ. ಸದರಿ ರಾಮಪ್ಪ ತಿರಿಕೊಂಡಿದ್ದು ಅವರ ಮಗ ಚೇತನ ಎನ್ನುವವರು ಹಾಕಿರುತ್ತಾರೆ. ಈ ಮೇಲ್ಮನವಿ 2 ವರುಷ ತಡವಾಗಿ ಸಲ್ಲಿಸಿರುತ್ತೇನೆ. ನಾವು ಈ ಮೇಲ್ಮನವಿಯನ್ನು ಎಪ್ ಡಿ ಪಿ ಆದೇಶದ ವಿರುದ್ದ ಮೇಲ್ಮನವಿ ಮಾಡಿರುತ್ತೇವೆ. ಸದರಿ ಎಫ್ ಡಿ ಪಿ ಅದೇಶ ಯಾವ ದಿನಾಂಕದಂದು ಆಗಿದೆ ಎಂದರೆ ಸಾಕ್ಷಿ 2007 ರಲ್ಲಿ ಆಗಿದೆ ಎನ್ನುತ್ತಾರೆ. ಸದರಿ ಆದೇಶ 2007 ರಲ್ಲಿ ಆಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸಾಕ್ಷಿ ನನಗೆ ನಿಖರವಾದ ವರುಷ ಹಾಗೂ ದಿನಾಂಕ ಗೊತ್ತಿಲ್ಲ ಎನ್ನುತ್ತಾರೆ. ಎದುರುದಾರರ ಪ್ರಕಾರ ಈ ಮೇಲ್ಮನವಿ 12 ವರುಷ 3 ತಿಂಗಳು 21 ದಿನ ತಡವಾಗಿದೆ ಎಂದರೆ ಹೌದು ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿ ಮುಂದುವರೆದು ಕೆಲವು ಪ್ರಕರಣ ಹೈ ಕೊರ್ಟ ನಲ್ಲಿ ಬಾಕಿ ಇರುತ್ತವೆ ಎನ್ನುತ್ತಾರೆ.

ಅರ್ ಎ ನಂಃ 39/2023

ಪಿ. ಡಬ್ಲ್ಯ್ಯೂ– 1

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

**( ಆನಂದ ಎಸ್ ಕರಿಯಮ್ಮನವರ್)**

4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,

ಧಾರವಾಡ.